**CCE RF**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 03. 2018 ] **ಸಂಕೇತ ಸಂಖ್ಯೆ : 33-K**

Date : 28. 03. 2018 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ / Regular Fresh)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 8 × 1 = 8 |
| 1. | ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿಯಲ್ಲಿ ಪ್ರಕಟಿಸಿದನು ? | |
| | ***ಉತ್ತರ :*** | |
| | ಇಂದ್ರನು ತನಗಾದ ಸಂತೋಷವನ್ನು ಗಿಳಿರಾಯನಿಗೆ ವರವನ್ನು ನೀಡುವ ಮೂಲಕ ಪ್ರಕಟಿಸಿದನು. | |
| 2. | ಅಸಿ–ಮಸಿ ಎಂಬುದರ ಅರ್ಥವನ್ನು ತಿಳಿಸಿ. | |
| | ***ಉತ್ತರ :*** | |
| | 'ಅಸಿ' ಎಂದರೆ ಯುದ್ಧ, ಯುದ್ಧ ಎಂದರೆ ಸೈನಿಕರು, ಸೈನಿಕರ ಬಲ.<br>'ಮಸಿ' ಎಂದರೆ ಸಾಹಿತ್ಯರಚನೆ ಎಂದರ್ಥ. | |
| 3. | ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು ? | |
| | ***ಉತ್ತರ :*** | |
| | ಪುಟ್ಟರಾಜರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. | |



[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 4. | ಹಕ್ಕಿಗಳ ಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?<br>***ಉತ್ತರ :***<br>ಹಕ್ಕಿಗಳ ಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯತೆ ಇದೆ. | |
| 5. | ಗುರುಗಳು ಹೇಳಿದಂತೆ ಕಾಫೀ ಮತ್ತು ಕಪ್ಪು ಯಾವುದರ ಪ್ರತೀಕಗಳು ?<br>***ಉತ್ತರ :***<br>ಗುರುಗಳು ಹೇಳಿದಂತೆ ಕಾಫೀ ಎಂದರೆ ಜೀವನ; ಕಪ್ಪು ಎಂದರೆ ಹಣ, ಅಂತಸ್ತು, ಅಧಿಕಾರ ಇವುಗಳ ಪ್ರತೀಕ. | |
| 6. | ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಯಾವುದು ?<br>***ಉತ್ತರ :***<br>ಮೇಲೇರಿದವರು ಎಷ್ಟು ಹೊತ್ತು ಇರಲು ಸಾಧ್ಯ; ಮತ್ತೆ ಇಳಿಯಲು ನಾನು ಬೇಕೇ ಬೇಕು ಎಂಬ ಸವಾಲನ್ನು ಏಣಿಯು ಹಾಕುತ್ತದೆ. | |
| 7. | ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳಿದ್ದಾರೆ ?<br>***ಉತ್ತರ :***<br>ಅಡಿಗರು ಹಗಲಿರುಳು ಒಂದೇ ಹೆಗ್ಗುರಿಯ ಸಾಧನೆಗಾಗಿ ಹೋರಾಡಬೇಕೆಂದು ಹೇಳಿದ್ದಾರೆ. | |
| 8. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | 11 × 2 = 22 |
| 9. | ಗಿಳಿಯು ಇಂದ್ರನನ್ನು ಯಾವ ವರ ಕೇಳಿತು ?<br>***ಉತ್ತರ :***<br>"ದೇವರಾಜ ಈ ಮರವು ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲಪುಷ್ಪಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು!" ಎಂದು ಗಿಳಿಯು ಇಂದ್ರನಿಂದ ವರವನ್ನು ಕೇಳಿತು. | |
| 10. | ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?<br>***ಉತ್ತರ :***<br>ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹದಿಂದ ರಕ್ಷಣೆ ಪಡೆಯಲು ಗೂಡುಗಳನ್ನು ನಿರ್ಮಿಸುತ್ತವೆ. ಪ್ರಖರ ಸೂರ್ಯರಶ್ಮಿ ಹವಾಮಾನ ವೈಪರೀತ್ಯ ಪ್ರತಿರೋಧಿಸಲು ಮೊಟ್ಟೆ, ಮರಿಗಳನ್ನು ರಕ್ಷಿಸಲು ಹಕ್ಕಿಗಳು ಗೂಡನ್ನು ನಿರ್ಮಿಸಿಕೊಳ್ಳುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?<br>*ಉತ್ತರ :*<br>ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಬೇಕು. ಅಲಂಕಾರಗಳ ಬೆನ್ನುಹತ್ತಿ ಓಡಿ ಓಡಿ ಜೀವನವನ್ನು ಮರೆಯಬಾರದು. ಜೀವನದಲ್ಲಿ ಏನು ಸಿಕ್ಕಿದೆಯೋ ಅದನ್ನೇ ಚೆನ್ನಾಗಿ ಆಸ್ವಾದಿಸಬೇಕು. ಕಷ್ಟಗಳು ಚಿಂತೆಯನ್ನು ಬಿಟ್ಟು ಕಾಫೀ ಎಂಬ ಜೀವನವನ್ನು ಆಸ್ವಾದಿಸುವುದನ್ನು ಕಲಿಯಬೇಕೆಂದು ಗುರುಗಳು ಹೇಳಿದರು. | |
| 12. | ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು ?<br>*ಉತ್ತರ :*<br>ಥೇಮ್ಸ್ ನದಿಯ ಮೇಲೆ ಇರುವ ಬ್ರಿಜ್‌ಗಳಲ್ಲಿ ಟವರ್ ಬ್ರಿಜ್ ಪ್ರಮುಖವಾದುದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದೂವರೆ ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿಕೊಡುತ್ತದೆ. ಇದು ಟವರ್ ಬ್ರಿಜ್‌ನ ವೈಶಿಷ್ಟ್ಯವಾಗಿದೆ. | |
| 13. | ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೆಗಳಾವುವು ?<br>*ಉತ್ತರ :*<br>ಥೇಮ್ಸ್ ನದಿಯ ಮೇಲೆ 13 ಬ್ರಿಜ್‌ಗಳಿವೆ. ಇವುಗಳಲ್ಲಿ ಪ್ರಮುಖವಾದ ಪ್ರಸಿದ್ಧ ಸೇತುವೆಗಳೆಂದರೆ, ವೆಸ್ಟ್‌ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ, ಲಂಡನ್ ಸೇತುವೆ, ಟವರ್ ಸೇತುವೆ ಇವೇ ಮೊದಲಾದವು ಪ್ರಸಿದ್ಧ ಸೇತುವೆಗಳಾಗಿವೆ. | |
| 14. | ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ ?<br>*ಉತ್ತರ :*<br>ನಾನು ಮೇಲೇರಿದವನೆಂಬ ಹಮ್ಮು ಕರಗಿ ಭೂಮಿ ಶಾಶ್ವತ ಎಂಬ ಭಾವನೆ ಮೂಡಿದವರಿಗೆ, ನಮ್ರತೆಯಿಂದ ಇರುವವರಿಗೆ, ಅಹಂಕಾರವನ್ನು ಬಿಟ್ಟು ಬೆಳೆಯಬಲ್ಲವರಿಗೆ ನಾನು ಸ್ಪಂದಿಸುತ್ತೇನೆ ಎಂದು ಏಣಿ ಹೇಳುತ್ತದೆ. | |
| 15. | ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ಸಿ.ಪಿ.ಕೆ. ಅವರು ನೀಡುವ ಹೋಲಿಕೆಗಳಾವುವು ?<br>*ಉತ್ತರ :*<br>ತಟ್ಟೆಯಲ್ಲಿರುವ ಕರ್ಪೂರ ಮೌನವಾಗಿ ಕರಗಿಹೋಗುವಂತೆ, ದೀಪದ ಎದುರಿಗೆ ಕರಾಳ ಕತ್ತಲು ಮರೆಯಾಗುವಂತೆ, ಶಾಂತಿ ಸಮಾಧಾನದಿಂದ ಬದುಕಿನ ಕರ್ತವ್ಯವನ್ನು ಮುಗಿಸು. ಸುಮ್ಮನೆ ಕೂಗಾಡಿ ಹಾರಾಡಿ ಫಲವಿಲ್ಲವೆಂದು ಕವಿಗಳು ಕರ್ಪೂರ ಮತ್ತು ದೀಪದ ಹೋಲಿಕೆಯನ್ನು ನೀಡಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಕುಣಿಗಲ್ ಕೆರೆಯ ವೈಭವ ಎಂಥವರನ್ನೂ ಬೆರಗುಗೊಳಿಸುವಂತಿತ್ತು ಏಕೆ ?<br>***ಉತ್ತರ :***<br>ನೀರು ತುಂಬಿರುವ ಕುಣಿಗಲ್ ಕೆರೆಯ ವೈಭವವನ್ನು ನೋಡುವುದೇ ಚಂದ. ಬಾಳೆಯ ಹಣ್ಣಿನಂತೆ ಬಾಗಿರುವ, ನಿಂಬೆಯ ಹಣ್ಣಿನಂತೆ ತುಂಬಿರುವ ಕಲ್ಲುಕಟ್ಟೆಯ ಕುಣಿಗಲ್ ಕರೆಯನ್ನು ನೋಡುವುದೇ ಆನಂದಕರ. ಕೆರೆಯ ಅಂದವನ್ನು ನೋಡಿ ಸವಿಯಲು ಶಿವನೇ ಅಲ್ಲಿಗೆ ಬಂದನೆಂದು ಜನಪದರು ವರ್ಣಿಸುತ್ತಾ ಎಲ್ಲರನ್ನು ತನ್ನೆಡೆಗೆ ಆಕರ್ಷಿಸುವ ಚಂದವನ್ನು ಕುಣಿಗಲ್ ಕೆರೆ ಹೊಂದಿತ್ತೆಂದು ವರ್ಣಿಸುತ್ತಾರೆ. | |
| 17. | ಬಸವಣ್ಣನವರು ಜನರ ಮೌಢ್ಯತೆಯನ್ನು ಯಾವ ರೀತಿ ಖಂಡಿಸಿದ್ದಾರೆ ?<br>***ಉತ್ತರ :***<br>ಜನರು ನೀರನ್ನು ಕಂಡಾಗ ಮುಳುಗಿ ಸ್ನಾನ ಮಾಡುತ್ತಾರೆ. ಇದರಿಂದ ನಾವು ಪುನೀತರಾದೆವೆಂದು ಭಾವಿಸುತ್ತಾರೆ. ಮರವನ್ನು ಕಂಡಾಗ ಅದಕ್ಕೆ ಪ್ರದಕ್ಷಿಣೆ ಹಾಕುತ್ತಾರೆ. ಮಳೆ ಇಲ್ಲದಿದ್ದರೆ ಹೊಳೆಯ ನೀರು ಬತ್ತಿಹೋಗುತ್ತದೆ. ಅಂತೆಯೇ ಮರವೂ ಸಹ ಒಣಗಿ ಹೋಗುತ್ತದೆ. ಇವುಗಳನ್ನೇ ದೇವರೆಂದು ಪೂಜಿಸುವ ಜನ ಮೌಢ್ಯತೆಯಿಂದ ನಿಜವಾದ ದೇವರನ್ನೇ ಮರೆತಿದ್ದಾರೆ ಎಂದು ಬಸವಣ್ಣನವರು ಜನರು ಬಹಿರಂಗವಾಗಿ ಆಚರಿಸುವ ಮೌಢ್ಯ ಅಂಧಾಚಾರಗಳನ್ನು ಖಂಡಿಸಿದ್ದಾರೆ. | |
| 18. | ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು ?<br>***ಉತ್ತರ :***<br>"ಭೀಮಣ್ಣಾ ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ, ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿಯುವವರಿಗೆ ದೇವರ ಸಹಾಯ ಇದ್ದೇ ಇರುತ್ತದೆ" ಎಂಬ ವೈದ್ಯರ ಮಾತು ಭೀಮನಾಯಕನ ಮನಸ್ಸನ್ನು ಚುಚ್ಚಿದವು. ನಾನು ಕಾಯುವ ಕೆಲಸವನ್ನು ಎಂದು ? ಯಾವುದನ್ನು ಮಾಡಿದ್ದೇನೆ ? ಎಂದು ಭೀಮನಾಯಕನು ಚಿಂತಿತನಾದನು. | |
| 19. | ಕವಯಿತ್ರಿಯು ತಿಳಿಸುವಂತೆ ಹೊಳೆಯ ದಂಡೆಯ ಸಾಲಿನಲ್ಲಿ ಯಾವ ನೆನಪುಗಳಿವೆ ?<br>***ಉತ್ತರ :***<br>ಕವಯಿತ್ರಿಯವರು ತಿಳಿಸುವಂತೆ ಹೊಳೆಯ ದಂಡೆಯ ಸಾಲಿನಲ್ಲಿ ರಾಜ್ಯಗಳು ಹುಟ್ಟಿ, ರಾಜ್ಯಗಳು ವಿನಾಶ ಹೊಂದಿದ ಕಥೆಗಳಿವೆ. ಹಲವು ಶತಮಾನಗಳಿಂದ ನಾಡಿನ ಜನರಿಗೆ ಅನ್ನನೀಡಿದ ನೇಗಿಲಯೋಗಿಯ ಬವಣೆಯ ಬದುಕಿನ ಕಥೆಗಳಿವೆ. ರೈತನ ನೋವಿನ ಕಥೆಯಿದೆ. ಅಲ್ಲಿ ಸೇರುವ ಸಂತೆ, ಜಾತ್ರೆಯಲ್ಲಿ ಭಾಗವಹಿಸುವ ಜನರ ನೋವು–ನಲಿವಿನ, ಸಿಹಿ–ಕಹಿಗಳ, ಕೊಳು–ಕೊಡುಗೆಯ ಬಗೆಬಗೆಯ ನೆನಪುಗಳ ಭಂಡಾರವೇ ಅಲ್ಲಿದೆ ಎಂದು ತಿಳಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

20. **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**

(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು) 1 × 3 = 3

ಏಕಾಂಗಿ ವೀರನಂತೆ ....................................................
...................................................................
...................................................................
...................................... ಇಲ್ಲದಂತೆ ಕತ್ತಲಲ್ಲಿ ನಡೆದನು.

**ಅಥವಾ**

ಕಾಡು ಕಾಡು ಅಲೆದ ................................................
...................................................................
...................................................................
...................................... ಮಹಾಬೆಳಕೊಂದು ಕಂಡಿತು.

***ಉತ್ತರ :***

ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು ।
ಅರಮನೆಯ ಮೋಹವನ್ನು ಹರಿದುಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು ॥

**ಅಥವಾ**

ಕಾಡುಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು ।
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು ॥

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** 2 × 3 = 6

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿಗಳು, ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| ಒಟ್ಟು | 3 ಅಂಕಗಳು |

21. ರಮೇಶಗೌಡ ಎಂ.ಕೆ.

***ಉತ್ತರ :***

ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಅವರು ಧಾರವಾಡ ಜಿಲ್ಲೆಯ ನರಗುಂದ ತಾಲ್ಲೂಕಿನ ಕಿತ್ತೂರು ಗ್ರಾಮದಲ್ಲಿ ೧೯೭೫ ರಲ್ಲಿ ಜನಿಸಿದರು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಇವರು 'ಅಮೃತಕ್ಕೆ ಹಾರಿದ ಗರುಡ', 'ರೂಪ ಬಯಲು', 'ಗಾನಯೋಗಿ ಡಾ॥ ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. | |
| | ಇವರ 'ಅಮೃತಕ್ಕೆ ಹಾರಿದ ಗರುಡ' ಕೃತಿಗೆ 'ರತ್ನಾಕರವರ್ಣಿ ಮುದ್ದಣ ದತ್ತಿ ಪ್ರಶಸ್ತಿ', 'ವರ್ಷದ ಉತ್ತಮ ಕೃತಿ' ಪ್ರಶಸ್ತಿಗಳು ದೊರೆತಿವೆ. | |
| 22. | ಗೋಪಾಲಕೃಷ್ಣ ಅಡಿಗ ಎಂ.<br>***ಉತ್ತರ :*** | |
| | ಎಂ. ಗೋಪಾಲಕೃಷ್ಣ ಅಡಿಗರು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ ೧೯೧೮ ರಲ್ಲಿ ಜನಿಸಿದರು. | |
| | ಇವರು 'ಭಾವತರಂಗ', 'ಚಂಡೆಮದ್ದಳೆ', 'ಭೂಮಿಗೀತ', 'ನಡೆದುಬಂದ ದಾರಿ', 'ಅನಾಥೆ', 'ಆಕಾಶದೀಪ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. | |
| | ಇವರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ಲಭಿಸಿವೆ. ಇವರು ೫೧ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | $2 \times 3 = 6$ |
| | ಕೃತಿ, ಕರ್ತೃ, ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 23. | "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ"<br>***ಉತ್ತರ :*** | |
| | ಈ ವಾಕ್ಯವನ್ನು ಡಾ॥ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಬರೆದಿರುವ 'ವ್ಯಕ್ತಿತ್ವ' ಎಂಬ ಕೃತಿಯಿಂದ ಆರಿಸಿದ 'ಅಸಿ–ಮಸಿ–ಕೃಷಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ. | |
| | ಈ ಮಾತನ್ನು ಲೇಖಕರು ಹೇಳಿದ್ದಾರೆ. | |
| | ನಿಜಸಂಗತಿ ಹೇಳಬಹೇಕೆಂದರೆ ರೈತರಷ್ಟು ಕಷ್ಟಪಡುವವರು ಮತ್ತೊಬ್ಬರಿಲ್ಲ. ಅವರಂತೆ ತೊಂದರೆ ಅನುಭವಿಸುವವರೂ ಬೇರೊಬ್ಬರಿಲ್ಲ. ಮಳೆಯ ಅಭಾವ, ಅತಿವೃಷ್ಟಿ, ಭೂಮಿ ಬರಡಾಗುತ್ತಿರುವುದು, ಕಳಪೆ ಬೀಜಗಳು ಹೀಗೆ ಈ ಬದುಕೇ ನಶ್ವರ ಎಂಬ ಭಾವನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರೈತರಲ್ಲಿ ಬಂದಿದೆ. ಆದರೂ ಅವರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿದ್ದಾರೆ ಎಂದು ರೈತರ ದುಡಿಮೆಯನ್ನು ಮೆಚ್ಚಿ ಈ ಮಾತನ್ನು ಹೇಳಿದ್ದಾರೆ. | |
| | ಹಾಸಿಗೆ ಇದ್ದಷ್ಟು ಕಾಲುಚಾಚಿ ಬದುಕುತ್ತಿರುವ ರೈತರ ಬದುಕು ಇತರರಿಗೆ ಮಾದರಿಯಾಗಿದೆ. | |
| 24. | "ನೆಲದಮ್ಮ ನವವಧುವೆ ಆದಳಿಂತು!" | |
| | ***ಉತ್ತರ :*** | |
| | ಈ ವಾಕ್ಯವನ್ನು ಬಸವರಾಜ ಸಾದರ ಅವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆರಿಸಿದ 'ಸವಿಚೈತ್ರ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ. | |
| | ಈ ಮಾತನ್ನು ಚೈತ್ರಮಾಸವನ್ನು ವರ್ಣಿಸುತ್ತಾ ಕವಿಗಳು ಹೇಳಿದ್ದಾರೆ. | |
| | ಚೈತ್ರವೆಂದರೆ ವಸಂತ, ವಸಂತನೆಂದರೆ ಋತುಗಳ ರಾಜ ಈ ಋತುವಿನಲ್ಲಿ ಫಲಪುಷ್ಪಗಳು ಸಮೃದ್ಧವಾಗಿರುತ್ತವೆ. ಸುಖದ ಸುಗ್ಗಿಯು ಎಲ್ಲೆಡೆ ತುಂಬಿ ಬಂದಿದೆ. ಯುಗದ ಆದಿಯಲ್ಲಿ ಎಲ್ಲೆಡೆ ಹೊಸ ಕಳೆ ತುಂಬಿಕೊಂಡಿದೆ. ಬಗೆ ಬಗೆಯ ಬಣ್ಣದ ಹೂಗಳು ಅರಳಿ ಚೆಲುವಿನ ಚಿತ್ತಾರವನ್ನೇ ಬಿಡಿಸಿವೆ. ಎಲ್ಲೆಡೆಯು ಹರ್ಷ ಮನೆಮಾಡಿದೆ. ಭೂತಾಯಿ ನವವಧುವಿನಂತೆ ಸರ್ವಾಂಗ ಸುಂದರವಾಗಿ ಶೋಭಿಸುತ್ತಿದ್ದಾಳೆಂದು ಕವಿ ವರ್ಣಿಸುತ್ತಾ ಹೀಗೆ ಹೇಳಿದ್ದಾರೆ. | |
| | ಭೂತಾಯಿ ಸೊಬಗನ್ನು ವರ್ಣಿಸುತ್ತಾ ಹೃದಯ ತುಂಬಿ ಕವಿ ಚೈತ್ರಮಾಸವನ್ನು ವರ್ಣಿಸುವ ಪರಿ ಇದಾಗಿದೆ. | |
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 25. | ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ಅರ್ಥಪೂರ್ಣವಾಗಿ ಬರೆಯಿರಿ. | |
| | ***ಅಥವಾ*** | |
| | 'ನನ್ನ ಗೋಪಾಲ' ನಾಟಕದಲ್ಲಿ ಬರುವ ಪ್ರಕೃತಿಯ ವರ್ಣನೆಯನ್ನು ಸ್ವಾರಸ್ಯಪೂರ್ಣವಾಗಿ ಬರೆಯಿರಿ. | |
| | ***ಉತ್ತರ :*** | |
| | ಗೋಪಾಲನು ಬನದಿಂದ ಬುಟ್ಟಿಯಲ್ಲಿ ಬಗೆ ಬಗೆಯ ಹೂಗಳನ್ನು ತಂದಿದ್ದಾನೆ. ಆ ಬನದ ಸೊಬಗನ್ನು ವರ್ಣಿಸುತ್ತಾ 'ಅಮ್ಮಾ ನೀನೊಬ್ಬಳು ಅಲ್ಲಿದ್ದರೆ ಆ ಬನವೇ ಸೊಗಸಮ್ಮ' | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಎಂದಾಗ. ಅವನ ತಾಯಿಯು ಹೊತ್ತಾಗುತ್ತದೆ ಶಾಲೆಗೆ ಹೊರಡು ಮಗು ಎನ್ನುತ್ತಾಳೆ. ಆಗ ಗೋಪಾಲನು ಅಮ್ಮಾ ನನಗೆ ಕಾಡು ದಾಟಿ ಬರಲು ಭಯವಾಗುತ್ತದೆ. ನನ್ನ ಗೆಳೆಯರ ಜೊತೆ ಆಳುಗಳು ಬರುತ್ತಾರೆ ನನಗೂ ಒಬ್ಬ ಆಳನ್ನು ನೇಮಿಸಿಕೊಡಮ್ಮಾ ಎನ್ನುತ್ತಾನೆ. ಆಗ ಅವನ ತಾಯಿಯು ತನ್ನ ಬಡತನದ ಬವಣೆಯನ್ನು ನೆನೆದು ಮರುಗುತ್ತಾಳೆ. ಗೋಪಾಲನು ನನಗೆ ಒಂದು ಹೊಸ ಪಂಚೆಯನ್ನು ಕೊಡಿಸಮ್ಮಾ ಎಂದಾಗ ತಾಯಿಯು ತಾನು ಸಂಪಾದಿಸಿದ ದುಡ್ಡಿನಿಂದ ತಂದ ಪಂಚೆಯನ್ನು ನೀಡುತ್ತಾಳೆ. ಹರ್ಷಚಿತ್ತನಾದ ಗೋಪಾಲನು ಶಾಲೆಗೆ ಹೊರಡುವಾಗ ಅವನ ಹಣೆಗೆ ತಿಲಕವನ್ನಿಟ್ಟು ಶಾಲೆಯಿಂದ ಬರುವಾಗ ಕಾಡಿನಲ್ಲಿ ಹೆದರಿಕೆಯಾದರೆ ಗೋಪಾಲನನ್ನು ಕೂಗು ಎಂದು ಗೋಪಾಲನನ್ನು ಅವನ ತಾಯಿ ಶಾಲೆಗೆ ಕಳುಹಿಸಿದಳು.

***ಅಥವಾ***

ಗೋಪಾಲನನ್ನು ಅವನ ತಾಯಿ ಏಳಿಸುವ ರೀತಿಯೇ ಸೊಗಸಾಗಿದೆ. ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಹಕ್ಕಿಗಳು ಹಾಡುತ್ತ, ಹಾರಾಡುತ್ತಾ ಕರೆಯುತ್ತಿವೆ. ಬನದ ಹೂಗಳು ಅರಳಿ ನಿನಗಾಗಿ ಕಾಯುತ್ತಿವೆ ಎಂದಳು. ಗೋಪಾಲನು ಬನವನ್ನು ವರ್ಣಿಸುವ ರೀತಿ ಅದ್ಭುತ. ಬನದಲ್ಲಿ ಏನಮ್ಮ ಸೊಗಸು! ಏನು ಆನಂದ! ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತ ಬಾಳೆಯ ಹೂವು, ಗೋರಂಟಿಯ ಹೂವು! ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿರುವುದು. ಸೂರ್ಯದೇವನ ಹೊಂಬೆಳಕು! ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಯ ಮಿರುಗುವ ಲೀಲೆ! ಹೂವಿನಗೊಂಚಲ ಭಾರಕ್ಕೆ ತಲೆಬಾಗಿರುವ ಮರ! ಹೀಗೆ ಪ್ರಕೃತಿಯ ವರ್ಣನೆ ಮನೋಹರವಾಗಿ ನಾಟಕದ ತುಂಬಾ ಮೂಡಿ ಬಂದಿದೆ.

26. ಅರ್ಜುನ ಮತ್ತು ಉತ್ತರ ಕುಮಾರ ಇವರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವರ್ಣನಾತ್ಮಕವಾಗಿ ಬರೆಯಿರಿ.

***ಅಥವಾ***

ಅರ್ಜುನ ಮತ್ತು ಉತ್ತರ ಕುಮಾರನ ಗುಣಸ್ವಭಾವಗಳಲ್ಲಿರುವ ವ್ಯತ್ಯಾಸವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

***ಉತ್ತರ :***

ಅರ್ಜುನನ ಸಾರಥ್ಯದಲ್ಲಿ ರಥವು ರಣರಂಗದತ್ತ ಮುನ್ನುಗ್ಗಿದಾಗ ಉತ್ತರಕುಮಾರನು ಕೌರವ ಸೇನೆಯನ್ನು ನೋಡಿ ಹೆದರಿ ರಥದಿಂದ ಇಳಿದು ಓಡಲು ಯತ್ನಿಸಿದ್ದಾನೆ. ಕಣ್ಣು ಕಾಣುವವರೆಗೂ ಇರುವ ವಿಶಾಲವಾದ ಸೇನಾಸಾಗರವನ್ನು ಕಂಡ ಉತ್ತರನು ಆಶ್ಚರ್ಯಚಕಿತನಾಗಿ ಇಷ್ಟು ದೊಡ್ಡ ಸೈನ್ಯದೊಡನೆ ಯುದ್ಧಮಾಡಲು ಖಂಡಿತಾ ನನ್ನಿಂದ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಾಧ್ಯವಿಲ್ಲ. ಆ ಶಿವನಿಂದ ಮಾತ್ರ ಇದು ಸಾಧ್ಯ. ಇಂತಹ ಸೈನ್ಯಕ್ಕೆ ನನ್ನ ನಮಸ್ಕಾರ! ಎಂದಾಗ ಅರ್ಜುನನು ನಗುತ್ತಾ ರಥವನ್ನು ಮುನ್ನಡೆಸಿದನು. ಆಗ ಇನ್ನೂ ಭಯಗೊಂಡ ಉತ್ತರನು ರಥದ ಹಿಂಭಾಗಕ್ಕೆ ಬಂದು ರಥದಿಂದ ಧುಮುಕಿ ಒಂದೇ ಸಮನೆ ಬಿಟ್ಟಮಂಡೆಯಲಿ ಓಡತೊಡಗಿದನು! ಉತ್ತರನ ಈ ಅವಸ್ಥೆಯನ್ನು ನೋಡಿ ಮನಸ್ಸಿನಲ್ಲಿಯೇ ನಕ್ಕ ಅರ್ಜುನನು ಅರಮನೆಯಲ್ಲಿ ಹೆಣ್ಣುಮಕ್ಕಳ ಮುಂದೆ ಬಾಯಿಗೆ ಬಂದಂತೆ ಮಾತನಾಡಿದೆ. ಯುದ್ಧ ಭೂಮಿಯಲ್ಲಿ ಶತ್ರು ಸೈನ್ಯವನ್ನು ಹಿಮ್ಮೆಟ್ಟಿಸುವ ಬದಲು ನಾಡನರಿಯ ರೀತಿ ಓಡುತ್ತಿರುವೆಯಲ್ಲ. ನಿನ್ನನ್ನು ಹೋಗಲು ಬಿಡುವುದಿಲ್ಲ ಎಂದು ಗದರಿಸಿದನು. ಆಗ ಉತ್ತರನು ಯುದ್ಧರಂಗದಿಂದ ಓಡಿದ ಪಾಪದ ಪ್ರಾಯಶ್ಚಿತ್ತವನ್ನು ಭೂಸುರರು ಪರಿಹರಿಸುತ್ತಾರೆ. ನನಗೆ ಸುರರ ಸತಿಯರು ಬೇಡ. ನಮ್ಮ ಅರಮನೆಯ ನಾರಿಯರೇ ಸಾಕು. ಇಂದ್ರಪದವಿಗಿಂತ ನಮ್ಮ ಅರಮನೆಯ ಪದವಿಯೇ ಸಾಕು. ನನ್ನನ್ನು ನೀನು ಇಲ್ಲಿಂದ ಬಿಟ್ಟರೆ ಸಾಕೆಂದು ಉತ್ತರನು ಗೋಳಾಡಿದನು. | |
| | **ಅಥವಾ** | |
| | ಮಹಾಭಾರತದಲ್ಲಿ 'ಉತ್ತರನ ಪೌರುಷ' ಒಂದು ಸ್ವಾರಸ್ಯಕರ ಪ್ರಸಂಗ. ಈ ಪ್ರಸಂಗವನ್ನು ಕುಮಾರವ್ಯಾಸ ತನ್ನ ಕಾವ್ಯದಲ್ಲಿ ರಸಪೂರ್ಣವಾಗಿ ಚಿತ್ರಿಸಿದ್ದಾನೆ. ಉತ್ತರಕುಮಾರನು ಶೌರ್ಯವಿಲ್ಲದ ಬರೀ ಬಡಾಯಿಕೊಚ್ಚಿಕೊಳ್ಳುವುದರ ಪ್ರತೀಕ. ಬರಿಯ ಬಾಯಿ ಬಡಿವಾರ ತೋರಿ ನಗೆಪಾಟಲಿಗೆ ಗುರಿಯಾಗುವ ಸಂಕೇತ. ಅರ್ಜುನ ಶೌರ್ಯದ, ಪರಾಕ್ರಮದ, ವಿಜಯದ ಸಂಕೇತವಾಗಿದ್ದಾನೆ. ಅಸಾಧ್ಯವಾದುದನ್ನು ಸಾಧಿಸುತ್ತೇನೆಂಬ ಛಲದಂಕಮಲ್ಲ! ಮನೆಯಲ್ಲಿ ಹೆಣ್ಣುಮಕ್ಕಳ ಮುಂದೆ ಮಾತ್ರ ಪರಾಕ್ರಮವನ್ನು ತೋರಿಸಿಕೊಳ್ಳುವ ಉತ್ತರ ಅರ್ಜುನನ ಮುಂದೆ ನಿಸ್ತೇಜನಾಗಿ ಕಾಣುತ್ತಾನೆ. ಯಾವ ಕೆಲಸವನ್ನು ಆಡದೆ ಮಾಡಿ ತೋರಿಸಬೇಕು ಎಂಬುದಕ್ಕೆ ಅರ್ಜುನ ಸಾಕ್ಷಿಯಾದರೆ, ಕೇವಲ ಮಾತಿನಲ್ಲಿ ಬಡಾಯಿ ಕೊಚ್ಚಿಕೊಂಡು ಏನನ್ನು ಮಾಡದಿರುವುದಕ್ಕೆ ಉತ್ತರ ಸಾಕ್ಷಿಯಾಗಿ ನಿಲ್ಲುತ್ತಾನೆ. ಎಲ್ಲರೂ ಬಯಸುವುದು ಅರ್ಜುನನಂತಹ ಮಗನನ್ನೇ ಹೊರತು ಉತ್ತರಕುಮಾರನಂತಹ ಮಗನನ್ನಲ್ಲ. ಎರಡೂ ಪಾತ್ರಗಳು ವಿಭಿನ್ನ ನೆಲೆಯಲ್ಲಿ ಕಂಡುಬರುತ್ತವೆ. | |
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| | ದಯೆ, ಕರುಣೆ, ಪರೋಪಕಾರ ಇವು ಮನುಷ್ಯನ ಸ್ವಭಾವದಲ್ಲಿ ಅಡಕವಾಗಿರುತ್ತವೆ. ಕೆಲವೊಂದು ಕಾಲ ಈ ಗುಣಗಳು ಬಲಹೀನವಾಗಬಹುದು; ಉಳಿದ ಗುಣಗಳ ಪ್ರಭಾವದಿಂದ ಕುಗ್ಗಿರಬಹುದು. ಮನುಷ್ಯನ ಮನಸ್ಸಿನಲ್ಲಿ ಒಳಿತು ಕೆಡಕುಗಳ ಮೇಲಾಟ ನಿರಂತರ ಸಾಗುತ್ತಲೇ ಇರುತ್ತದೆ. ಆದರೆ ಸದ್ಗುಣ, ಪ್ರೇಮ, ನೀತಿಯ ಬಗ್ಗೆ ಗೌರವ – ಇವು ಮನುಷ್ಯನ ಅಂತರಾಳದಲ್ಲಿ ಇದ್ದೇ ಇರುತ್ತವೆ. ಯಾವ ಮನುಷ್ಯನೂ ಮೂಲತಃ ದುರ್ಗುಣಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅಥವಾ ಕಠೋರನಾಗಿರಲಾರ. ರವೀಂದ್ರನಾಥ ಠಾಕೂರರು ಒಂದೆಡೆ ಹೇಳುತ್ತಾರೆ. "ವ್ಯಕ್ತಿಗಳು ಕ್ರೂರರಾಗಿರಬಹುದು; ಆದರೆ ಮಾನವ ಮಾತ್ರ ಕರುಣಾಮಯಿ" ಎಂದು. ಸುಪ್ತಸದ್ಗುಣ ಹಾಗೂ ಸದ್ಗುಣ ಪ್ರೇಮ ಇವುಗಳನ್ನು ಚೇತರಿಸಲು ಸದಾ ಯತ್ನಿಸಬೇಕು. ಒಂದು ಕಾಲದಲ್ಲಿ ಸದ್ಗುಣಿಗೆ ಗೌರವ ಸಲ್ಲುತ್ತಿತ್ತು. ಮತ್ತೊಂದು ಕಾಲದಲ್ಲಿ ಶ್ರೀಮಂತನಿಗೆ ಗೌರವ ಸಲ್ಲುತ್ತಿತ್ತು. ಈಗಿನ ಕಾಲದಲ್ಲಿ ಮನುಷ್ಯನ ಗೌರವವನ್ನು ಆತನ ಬ್ಯಾಂಕಿನಲ್ಲಿಯ ಹಣ, ಅವನು ವಾಸಿಸುವ ಮನೆ, ಅವನು ಓಡಾಡುವ ವಾಹನ ಇವುಗಳ ಮೇಲೆ ನಿರ್ಣಯಿಸುವ ಪ್ರವೃತ್ತಿ ಕಂಡುಬರುತ್ತಿದೆ. ಇದು ಒಳ್ಳೆಯ ಲಕ್ಷಣವಲ್ಲ. ದಯೆ, ಪರೋಪಕಾರ, ಕರುಣೆ ಈ ಸದ್ಗುಣಗಳು ನಾವು ವಾಸಿಸುವ ಭೂಮಿಯನ್ನೇ ಸ್ವರ್ಗವನ್ನಾಗಿ ಮಾರ್ಪಡಿಸಬಲ್ಲವು. ಈ ಗುಣಗಳನ್ನು ಬೆಳೆಸಿಕೊಂಡಾಗ ಮನುಷ್ಯನ ಮನಸ್ಸಿಗೆ ನೆಮ್ಮದಿ, ಸುಖ, ಶಾಂತಿ, ಸಮಾಧಾನ ಉಂಟಾಗುತ್ತದೆ. | |
| 27. | ಈಗ ಮನುಷ್ಯನ ಗೌರವವನ್ನು ಯಾವ ವಿಷಯಗಳಿಂದ ಅಳೆಯುತ್ತಾರೆ ?<br>***ಉತ್ತರ :***<br>ಈಗ ಮನುಷ್ಯನ ಗೌರವವನ್ನು ಆತನ ಬ್ಯಾಂಕಿನಲ್ಲಿಯ ಹಣ, ಅವನು ವಾಸಿಸುವ ಮನೆ, ಓಡಾಡುವ ವಾಹನದಿಂದ ಅಳೆಯುತ್ತಾರೆ. | |
| 28. | ರವೀಂದ್ರನಾಥ ಠಾಕೂರರು ಮಾನವತೆ ಬಗ ಏನು ಹೇಳಿದ್ದಾರೆ ?<br>***ಉತ್ತರ :***<br>ರವೀಂದ್ರನಾಥ ಠಾಕೂರರು "ವ್ಯಕ್ತಿಗಳು ಕ್ರೂರರಾಗಿರಬಹುದು; ಆದರೆ ಮಾನವ ಮಾತ್ರ ಕರುಣಾಮಯಿ" ಎಂದಿದ್ದಾರೆ. | |
| 29. | ನಾವು ವಾಸಿಸುವ ಭೂಮಿಯನ್ನು ಸ್ವರ್ಗವನ್ನಾಗಿಸುವ ಶಕ್ತಿ ಯಾವ ಸದ್ಗುಣಗಳಿಗಿವೆ ?<br>***ಉತ್ತರ :***<br>ನಾವು ವಾಸಿಸುವ ಭೂಮಿಯನ್ನು ಸ್ವರ್ಗವನ್ನಾಗಿಸುವ ಶಕ್ತಿ ದಯೆ, ಪರೋಪಕಾರ, ಕರುಣೆ ಈ ಸದ್ಗುಣಗಳಿಗಿವೆ. | |
| 30. | ಮನುಷ್ಯನ ಮನಸ್ಸಿನಲ್ಲಿ ಯಾವುದರ ಹೋರಾಟ ನಿರಂತರವಾಗಿ ನಡೆಯುತ್ತಿದೆ ?<br>***ಉತ್ತರ :***<br>ಮನುಷ್ಯನ ಮನಸ್ಸಿನಲ್ಲಿ ಒಳಿತು ಕೆಡಕುಗಳ ಮೇಲಾಟ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. | |
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 31. | 'ಸಲೀಮನು ಶಾಲೆಗೆ ಹೋದನು' — ವಾಕ್ಯವು ಈ ಕಾಲದಲ್ಲಿದೆ.<br>***ಉತ್ತರ :*** (ಬಿ) ಭೂತಕಾಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | ಕ್ರಿಯಾಸಮಾಸಕ್ಕೆ ಈ ಪದವು ಉದಾಹರಣೆಯಾಗಿದೆ<br>***ಉತ್ತರ :*** (ಸಿ) ಮೈಕೊಡವಿ | |
| 33. | 'ಸಂತೆ ಹಾದಿಲ್ ಕಲ್ಲುಕಟ್ಟೆ' ಇಲ್ಲಿನ 'ಹಾದಿಲ್' ಪದದ ಗ್ರಾಂಥಿಕ ರೂಪ<br>***ಉತ್ತರ :*** (ಡಿ) ಹಾದಿಯಲ್ಲಿ | |
| 34. | 'ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ' — ಈ ವಾಕ್ಯದಲ್ಲಿರುವ ಅಲಂಕಾರ<br>***ಉತ್ತರ :*** (ಎ) ಉಪಮಾಲಂಕಾರ | |
| 35. | 'ಪಂಚಾಕ್ಷರಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>***ಉತರ :*** (ಎ) ಸವರ್ಣದೀರ್ಘ ಸಂಧಿ | |
| 36. | ಇವುಗಳಲ್ಲಿ 'ಸಾಮಾನ್ಯ ಅವ್ಯಯ'ಕ್ಕೆ ಉದಾಹರಣೆ<br>***ಉತ್ತರ :*** (ಬಿ) ಚೆನ್ನಾಗಿ | |
| 37. | 'ಮೊತ್ತಮೊದಲು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ<br>***ಉತ್ತರ :*** (ಸಿ) ದ್ವಿರುಕ್ತಿ | |
| 38. | 'ಗಳಿಗೆ' ಪದದ ತತ್ಸಮ ರೂಪ<br>***ಉತ್ತರ :*** (ಡಿ) ಘಟಿಕಾ | |
| 39. | 'ಗಿಡ, ಮರ, ಬೆಟ್ಟ' — ಇವು ಈ ನಾಮವಾಚಕಗಳಿಗೆ ಉದಾಹರಣೆ<br>***ಉತ್ತರ :*** (ಎ) ರೂಢನಾಮ | |
| 40. | ಇವುಗಳಲ್ಲಿ ಐದು ಮಾತ್ರೆಗಳಿಂದ ಕೂಡಿದ ಪದ<br>***ಉತ್ತರ :*** (ಬಿ) ಕಾವೇರಿ | |
| 41. | 'ರುಚಿಯನ್ನು' ಪದದಲ್ಲಿರುವ ವಿಭಕ್ತಿ<br>***ಉತ್ತರ :*** (ಬಿ) ದ್ವಿತೀಯಾ | |
| 42. | 'ತಕರಾರು' ಪದದ ಸಮಾನಾರ್ಥಕ ಪದ<br>***ಉತ್ತರ :*** (ಡಿ) ಆಕ್ಷೇಪಣೆ | |
| 43. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>* ಮನಸ್ಸಿದ್ದರೆ ಮಾರ್ಗ<br>* ಹಾಸಿಗೆ ಇದ್ದಷ್ಟು ಕಾಲು ಚಾಚು<br>* ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ನಿಮ್ಮನ್ನು ನಂಜನಗೂಡಿನ ಸರ್ಕಾರಿ ಪ್ರೌಢಶಾಲೆಯ 'ಅಭಿನವ್' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಶೈಕ್ಷಣಿಕ ಚಟುವಟಿಕೆಗಳನ್ನು ಕುರಿತು ಮೈಸೂರು ಜಿಲ್ಲೆಯ ಬೆಟ್ಟದ ತುಂಗಾ ಶಾಲೆಯಲ್ಲಿರುವ ಗೆಳೆಯ 'ಪ್ರಣವ್'ಗೆ ಒಂದು ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಮೈಸೂರಿನ ಅಶೋಕ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯ 'ಅಪೂರ್ವ' ಎಂದು ಭಾವಿಸಿಕೊಂಡು, ನಿಮ್ಮ 'ವ್ಯಾಸಂಗ ದೃಢೀಕರಣ ಪತ್ರ'ವನ್ನು ನೀಡುವಂತೆ ಕೋರಿ ಶಾಲಯ ಮುಖ್ಯಶಿಕ್ಷಕರಿಗೊಂದು ಮನವಿ ಪತ್ರ ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| 45. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ✳ ಜಲಸಂರಕ್ಷಣೆ | |
| | ✳ ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು | |
| | ✳ ದೂರದರ್ಶನದಿಂದಾಗುವ ಪ್ರಯೋಜನಗಳು | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ, ಭಾಷಾಶೈಲಿಗೆ | 2 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |